946
(B)

## ಕರ್ನಾಟಕ ಲೋಕಾಯುಕ್ತ

ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:23/11/2018

ನಂ:ಕಂ.ಲೋಕ್.ಬಿಸಿಡಿ 2519/2018

### ನೋಟೀಸು

ವಿಷಯ: ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

--

ಮೇಲ್ಕಂಡ ವಿಷಯಕ್ಕೆ ಸಂಬಂದಪಟ್ಟಂತೆ ತಮಗೆ ಈ ಮೂಲಕ ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ ತಮಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರು **ಹುಲಿಮಾವು ಕೆರೆಗೆ** ಸಂಬಂದಪಟ್ಟಂತೆ ದಿನಾಂಕ: **15-11-2018 ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಆದೇಶದಲ್ಲಿ ತಿಳಿಸಿರುವಂತೆ ದಿನಾಂಕ:19-03-2019 ರಂದು 3-00 ಗಂಟೆಗೆ ಖುದ್ದು ಗೌರವಾನ್ವಿತ ಲೋಕಾಯುಕ್ತರವರ ಮುಂದೆ ಹಾಜರಾಗತಕ್ಕದ್ದು.**

ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ

23/11

ಅಪರ ನಿಭಂದಕರು ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ,ಬೆಂಗಳೂರು

To:

1) **The C.E.O., Namma Bangalore foundation, 2nd floor, No54, Rockline centre, Richmond Road, Bangalore.**

2) **The Commissioner, BBMP, Bangalore**

3) **The Secretary, Karnataka State Pollution Control Board, Church street** Bangalore.

4) **The Chief Engineer, B W S S B, Cauvery Bhavan, Bangalore**

5) **Sri. Sathish, Chief Engineer(Lakes), BBMP, Bangalore.**

6) **The Deputy Conservator of Forest, BBMP, Bangalore.**

7) **The Tahsildar, Bangalore South Taluk, Bangalore**

8) **The Assistant Director of land Records, Bangalore South Taluk, Bangalore.**

# KARNATAKA LOKAYUKTA, BENGALURU

No.Compt/LOK/BCD-2519/2018/ARE-1 Date : 15.11.2018

## O R D E R

On behalf of the complainant Sri H.S.Doreswamy, Sri Suresh.N.R. is present. Sri T.Jaganath Rao, Deputy Conservator of Forest is present on behalf of the Commissioner, BBMP, Bengaluru and filed the Status Report dated 2.11.2018. On behalf of BWSSB Sri Prakash, Assistant Executive Engineer is present and filed the Status Report dated 14.11.2018. On behalf of Karnataka State Pollution Control Board, Bengaluru Sri Sadiq Ahmed, Senior Environmental Officer is present along with Sri R.V.Bhat, Law Officer.

2) It is useful to extract the relevant portion of the Status Report dated 14.11.2018, submitted by the Chief Engineer, BWSSB, Bengaluru which reads as follows –

"ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಾನ್ಯ ಲೋಕಾಯುಕ್ತರವರು ದಿನಾಂಕ:11.09.2018 ರ ಆದೇಶದಲ್ಲಿ ಹುಲಿಮಾವು ಕೆರೆಗೆ ತ್ಯಾಜ್ಯ ನೀರು ಹರಿಯುತ್ತಿರುತ್ತದೆ ಎಂದು ಉಲ್ಲೇಖಿಸಿರುತ್ತಾರೆ.

ಹುಲಿಮಾವು ಕೆರೆಯು ಬಿಬಿಎಂಪಿ ವ್ಯಾಪ್ತಿಯ ವಾರ್ಡ್ ನಂ.25 ಗೆ ಒಳಪಟ್ಟಿದ್ದು, ಸದರಿ ಕೆರೆಯು ಬಿಬಿಎಂಪಿಯ 110 ಹಳ್ಳಿಗಳ ವ್ಯಾಪ್ತಿಗೆ ಸೇರಿರುತ್ತದೆ.

ಪ್ರಸ್ತುತ ಈ ಪ್ರದೇಶದಲ್ಲಿ ಬೆಂಗಳೂರು ಜಲಮಂಡಳಿಯ ಒಳಚರಂಡಿ ವ್ಯವಸ್ಥೆ ಇರುವುದಿಲ್ಲವಾದ್ದರಿಂದ, ಇಲ್ಲಿನ ಕಟ್ಟಡಗಳ ಮಾಲೀಕರು ತಾವೇ ಸೋಕ್‌ಪಿಟ್ ಮತ್ತು ಎಸ್‌ಟಿಪಿ ಗಳನ್ನು ನಿರ್ಮಿಸಿಕೊಂಡು ತ್ಯಾಜ್ಯ ನೀರನ್ನು ಸಂಸ್ಕರಿಸಿಕೊಳ್ಳಲಾಗುತ್ತಿರುತ್ತದೆ.

ಹುಲಿಮಾವು ಕೆರೆಗೆ ಕಾಳೇನ ಅಗ್ರಹಾರ ಪ್ರದೇಶಗಳಿಂದ ತ್ಯಾಜ್ಯ ನೀರು ಹರಿಯದಂತೆ ತಡೆಗಟ್ಟಲು ಈ ಕೆರೆಯ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯನ್ನು 110 ಹಳ್ಳಿಗಳ ಒಳಚರಂಡಿ ಯೋಜನೆಯಡಿಯಲ್ಲಿ ಬೆಂಗಳೂರು ಜಲಮಂಡಳಿ ಕೈಗೆತ್ತಿಕೊಂಡಿದ್ದು, ಒಳಚರಂಡಿ ಲ್ಯಾಟರಲ್ಸ್ ಅಳವಡಿಸುವ ಕಾಮಗಾರಿಯನ್ನು ಮಾರ್ಚ್ 2018ರಲ್ಲಿ ಗುತ್ತಿಗೆದಾರರಿಗೆ ವಹಿಸಲಾಗಿರುತ್ತದೆ. ಕಾಮಗಾರಿಗೆ ಅಗತ್ಯವಿರುವ ಸರ್ವೆ ಕೆಲಸವು ಪ್ರಾರಂಭಗೊಂಡಿದ್ದು, ಒಳಚರಂಡಿ ಲ್ಯಾಟರಲ್ಸ್ ಕೊಳವೆ ಮಾರ್ಗವನ್ನು ಅಳವಡಿಸಲಾಗುವುದು. ಕಾಮಗಾರಿಯ ಅವಧಿಯು 36 ತಿಂಗಳುಗಳಿದ್ದು, ಕಾಮಗಾರಿಯು ಪೂರ್ಣಗೊಂಡ ನಂತರ ಮತ್ತು ಅದಕ್ಕೆ ಸಂಬಂಧಿಸಿದ ಸಬ್ ಮೈನ್ ಕೊಳವೆ ಮಾರ್ಗ ಮತ್ತು ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ಮಾಣದ ನಂತರ ಕೆರೆಗಳಿಗೆ ಹರಿಯುತ್ತಿರುವ ತ್ಯಾಜ್ಯ ನೀರನ್ನು ತಡೆಗಟ್ಟಿ ಮಂಡಳಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿಗೆ ಹರಿಸಿ

ಸಂಪೂರ್ಣವಾಗಿ ಶುದ್ಧೀಕರಿಸಲಾಗುವುದು ಎಂಬ ಮಾಹಿತಿಯನ್ನು ತಮ್ಮ ಘನ ಅವಗಾಹನೆಗೆ ಸಲ್ಲಿಸಲಾಗಿದೆ."

The Officers of the BWSSB to file the Status Report with regard to the steps taken by the next date of hearing.

3) It is useful to extract the relevant portion of the letter dated 2.11.2018, submitted by Sri T.Jaganath Rao, Deputy Conservator of Forest, BBMP which reads as follows –

"ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಹುಳಿಮಾವು ಗ್ರಾಮದ ಸರ್ವೆ ನಂ. 42 & ಕಮ್ಮನಹಳ್ಳಿ ಗ್ರಾಮದ ಸರ್ವೆ ನಂ. 110 ರಲ್ಲಿರುವ ಹುಳಿಮಾವು ಕೆರೆಯನ್ನು ಅಭಿವೃದ್ಧಿಪಡಿಸಿ, ನಿರ್ವಹಣೆ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದ್ದು, ಮಾನ್ಯ ಲೋಕಾಯುಕ್ತ, ಕರ್ನಾಟಕ ಸರ್ಕಾರ ರವರು ದಿನಾಂಕ: 11.09.2018 ರಂದು ಸದರಿ ಕೆರೆಯ ಬಗ್ಗೆ ವಿಚಾರಣೆ ಕೈಗೊಂಡು ಹುಳಿಮಾವು ಸರ್ಕಾರಿ ಕೆರೆಯಲ್ಲಿರುವ ಒತ್ತುವರಿಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಉಲ್ಲೇಖ (1) ರಲ್ಲಿ ಆದೇಶ ಹೊರಡಿಸಿರುತ್ತಾರೆ.

ಆದ್ದರಿಂದ, ತಾವುಗಳು ಬೆಂಗಳೂರು ದಕ್ಷಿಣ ತಾಲ್ಲೂಕು ಹುಳಿಮಾವು ಗ್ರಾಮದ ಸರ್ವೆ ನಂ. 42 & ಕಮ್ಮನಹಳ್ಳಿ ಗ್ರಾಮದ ಸರ್ವೆ ನಂ. 110 ರಲ್ಲಿರುವ ಹುಳಿಮಾವು ಕೆರೆಯಲ್ಲಿರುವ ಅನಧಿಕೃತ ಒತ್ತುವರಿಗಳನ್ನು ಸ್ಥಳದ ಮೇಲೆ ಗುರುತಿಸಿ, ಸದರಿ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಂಡು, ಸದರಿ ವಿಷಯದ ಬಗ್ಗೆ ವರದಿಯನ್ನು ಮಾನ್ಯ ಲೋಕಾಯುಕ್ತ,

ಕರ್ನಾಟಕ ಸರ್ಕಾರ ರವರಿಗೆ ಸಲ್ಲಿಸಲು ತಮ್ಮನ್ನು ಕೋರಿದೆ. ಈ ಪತ್ರದೊಂದಿಗೆ ಉಲ್ಲೇಖದ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ."

4) He further submitted that out of 145 acres of the lake area, around 19 acres and 26 guntas have been encroached. In the light of what is stated above, it would be in the interest of justice to implead the concerned Tahsildar and the Assistant Director of Land Records as respondents and issue notices to them.

5) The Tahsildar is directed to get the lake area surveyed and submit the report by the next date of hearing. The Assistant Director of Land Records is directed to co-operate with the Tahsildar concerned and get the lake area surveyed and submit the report by the next date of hearing.

6) Sri T.Jaganath Rao, Deputy Conservator of Forest, further submitted that around Rupees Twenty Four Crores is required to develop the Hulimavu lake and for the said purpose a proposal has already been sent to the Government, for consideration and as soon as the funds are released, the developmental activities of the lake will be taken-up.

Communicate this order to all the parties concerned. List this case on **19th March, 2019 at 3.00 p.m.**

(**Justice P.Vishwanatha Shetty**)
Lokayukta
State of Karnataka

*vl

7) Additional Registrar of Enq.1